

# ಬಿಟ್ಟೇನೆಂದರೂ ಬಿಡದು

# ಭುಲೇಶ್ವರ ಬೆಟ್ಟ

ಭವ್ಯ ತಾಣ ಭುಲೇಶ್ವರ ಮಂದಿರ. ಭಾರತದ ಪ್ರಖ್ಯಾತ, ಐತಿಹಾಸಿಕ ಸ್ಮಾರಕಗಳಲ್ಲೊಂದು. ಮಹಾರಾಷ್ಟ್ರದಲ್ಲಿರುವ ಬಹುತೇಕ ಬೆಟ್ಟಗಳಲ್ಲಿ ಮಂದಿರವೋ, ಕೋಟೆಯೋ ಇದ್ದೇ ಇರುತ್ತದೆ. ಭುಲೇಶ್ವರ ಶಿಲಾಮಂದಿರವೂ ಹಾಗೆಯೇ.

ಚಿತ್ರ– ಲೇಖನ:

**ಪ್ರಸಾದ್ ಶೆಣೈ ಆರ್.ಕೆ.**

ತಿರುವು– ಮುರುವಿನ ಹಾವಿನಂತಹ ಹಾದಿ ಎತ್ತರಕ್ಕೆ, ಬೆಟ್ಟದ ಮುಗಿಲಿನ ಹತ್ತಿರಕ್ಕೆ ಕರೆದುಕೊಂಡು ಹೋಗುವಂಥದು. ಹರುಳು ಚೋರೆ ಹಕ್ಕಿಗಳು, ಪಾರಿವಾಳಗಳು, ಪಿಕಳಾರಗಳು ಅಲ್ಲೇ ದೂರದ ಬಾನಿನಲ್ಲಿ ಖುಷಿಯಿಂದ ಹಾರಾಡುತ್ತಿದ್ದುವು. ಅದರ ಹಾರಾಟದ ಹಿನ್ನೆಲೆಯಲ್ಲಿಯೇ ಭುಲೇಶ್ವರ ಬೆಟ್ಟದ ತುದಿಯಲ್ಲಿ ಕಾಣಿಸುವುದೇ ವಿಹಂಗಮ ಮಂದಿರದ ಕಲ್ಲಿನ ಚಿತ್ತಾಕರ್ಷಕ ಗೋಪುರ.

ಹೊರಗಿನಿಂದ ನೋಡಿದಾಗಲೇ ಒಳಗೆ ಅದ್ಭುತವಾದ ಜಗತ್ತಿದೆ, ಬದುಕಿಗೆ ಬೇಕಾದ ಮೌನದ ಸೊಬಗಿದೆ ಅಂತ ಮೊದಲ ನೋಟದಲ್ಲಿಯೇ ಹೇಳುವಂತಿದೆ ಆ ಕಲ್ಲಿನ ಗೋಪುರ.

ಬೆಟ್ಟದಲ್ಲೊಂದು ಕೋಟೆ

ಮಹಾರಾಷ್ಟ್ರದ ಪುಣೆಯಿಂದ ಸುಮಾರು 45 ಕಿಮೀ ದೂರದ, ಪುಣೆ–– ಸೋಲಾಪುರ ಹೆದ್ದಾರಿಯಿಂದ 10 ಕಿ.ಮೀ ದೂರದಲ್ಲಿರುವ ಮಾಳ್‌ಶಿರಸ್‌ನ ಯಾವತ್ ಎನ್ನುವ ಊರಿನ ಕಾಡ ನಡುವಿನ ಬೆಟ್ಟದ ತಪ್ಪಲಿನಲ್ಲಿರುವ ಭವ್ಯವಾದ ತಾಣವೇ ಭುಲೇಶ್ವರ ಮಂದಿರ. ಭಾರತದ ಪ್ರಖ್ಯಾತ, ಐತಿಹಾಸಿಕ ಸ್ಮಾರಕಗಳಲ್ಲೊಂದು.

13 ನೇ ಶತಮಾನದ ಯಾದವರ ಕಾಲದಲ್ಲಿ ನಿರ್ಮಾಣಗೊಂಡ ಈ ಸುಂದರ ಮಂದಿರ ಲೋಕಪ್ರಿಯವಾಯಿತು. ಕೆಲ ಕಾಲದ ಬಳಿಕ ವಿದೇಶೀ ದಂಡುಕೋರರಿಂದ ಈ ಭವ್ಯ ಮಂದಿರ ಕೆಡವಲ್ಪಟ್ಟು ಮಣ್ಣಲ್ಲಿ ಅಡಗಿ ಹೋಗಿತ್ತು. ಆ ಬಳಿಕ ಇದನ್ನು ಹುಡುಕಿ ಕೆಲವೊಂದು ಭಾಗಗಳನ್ನು ಮರು ನಿರ್ಮಾಣ ಮಾಡಲಾಯಿತು ಎನ್ನುವ ಮಾಹಿತಿ ಲಭಿಸುತ್ತದೆ.

ಮಂದಿರದ ದಾರಿ ಕೊಂಚ ದುರ್ಗಮವಾಗಿದ್ದರೂ ಮಳೆಗಾಲದಲ್ಲಿ ಹಸಿರು ಅರಳಿ ಮನೋಹರವಾಗಿ ಕಾಣುತ್ತದೆ. ನಾವು ಹೋದದ್ದು ಬೇಸಿಗೆಯಲ್ಲಾದ್ದರಿಂದ ಆ ದೃಶ್ಯ ಸಿಗಲಿಲ್ಲ. ಆದರೆ ಬೇಸಿಗೆಯಲ್ಲಿ ಸುತ್ತಿ ಬಳಸಿ ಸಾಗುವ ದಾರಿಯನ್ನು ಕ್ರಮಿಸುವುದೇ ಖುಷಿಯ ಅನುಭವ. ಆ ಭವ್ಯ ಕಲ್ಲಿನ ಕೋಟೆಯಂತಹ ಮಂದಿರ ಮತ್ತದರ ಹೊಳೆವ ಅಂಚು ಕಣ್ಣಿಗೆ ಕಂಡರೂ ಸಾಕು, ಸುಸ್ತೆಲ್ಲ ಮಂಗಮಾಯ. ಈ ಸ್ಮಾರಕ ಭಾರತೀಯ ಕೇಂದ್ರ ಪುರಾತತ್ವ ಮತ್ತು ಪ್ರಾಚ್ಯ ವಸ್ತು ಇಲಾಖೆಯ ಅಧೀನದಲ್ಲಿದ್ದರೂ ಇದರ ಮಾಹಿತಿ ನೀಡುವ ಗೈಡ್ ಅಥವಾ ಮಾಹಿತಿ ಕೋಶ ಇಲ್ಲಿ ಸಿಕ್ಕುವುದಿಲ್ಲ.

ಶಿಲೆ ಶಿಲೆಯಲ್ಲೂ ಕಲೆ

ಆವರಣದಲ್ಲಿರುವ ಕಲ್ಲು ಮೆಟ್ಟಿಲುಗಳ ಮೇಲೆ ಸಾಗುತ್ತಿದ್ದಂತೆಯೇ ಒಂದೊಂದು ಕಲ್ಲುಗಳಲ್ಲಿಯೂ ಕತೆ ಇದೆ ಅನ್ನಿಸುತ್ತದೆ. ಅಲ್ಲೇ ಇರುವ ದೊಡ್ಡ ಗಂಟೆ ಬಾರಿಸಿದರೆ ಸುತ್ತಲಿನ ಮೌನದಲ್ಲಿ ಆ ಗಂಟೆಯ ಢಣ ಢಣ ಒಂದು